**Circular No – 079/2024**

Date: 25.12.2024

To
All Members of The Association

## KEA IS IN THE NEWS ONCE AGAIN

1. The members may refer to our Circular No. 77/2024 dated 23.12.2024 wherein the gist of the decision of the Division Bench of the Hon'ble High Court of Karnataka under which it had directed that employers must be heard in the Writ Petition challenging the Minimum Wages Notification.
2. Now the gist of the judgment is reported in the Vijaya Karnataka dated 25.12.2024. Extract of the news item is given over-leaf.
3. The members will be informed of the further developments in the matter.

**For KARNATAKA EMPLOYERS' ASSOCIATION**
**Sd/**
**[B C Prabhakar]**
**President**





**ಅಭಿವೃದ್ಧಿ ಕಾರ್ಯತಂತ್ರ: ಅರ್ಥಶಾಸ್ತ್ರಜ್ಞರು, ವಲಯ ತಜ್ಞರ ಜತೆ ಪ್ರಧಾನಿ ಮೋದಿ ಚರ್ಚೆ**

# ಕನಿಷ್ಠ ವೇತನ ನಿಗದಿಗೂ ಮುನ್ನ ಮಾಲೀಕರನ್ನು ಕೇಳಿ


## ಏಕಸದಸ್ಯ ಪೀಠಕ್ಕೆ ಹೈಕೋರ್ಟ್ ನಿರ್ದೇಶನ | 10 ವಾರಗಳಲ್ಲಿ ತೀರ್ಪಿಗೆ ಗಡುವು

**ವಿಕ ಸುದ್ದಿಲೋಕ** ಬೆಂಗಳೂರು

ಉದ್ಯೋಗಿಗಳಿಗೆ ಕನಿಷ್ಠ ವೇತನ ನಿಗದಿ ಮಾಡುವಾಗ ಉದ್ಯೋಗದಾತರ ಅನಿಸಿಕೆಯನ್ನೂ ಆಲಿಸಬೇಕು ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್ ವಿಭಾಗೀಯ ಪೀಠ, ಕನಿಷ್ಠ ವೇತನ ನಿಗದಿ ಕುರಿತ ವಿಚಾರದ ಬಗ್ಗೆ ಹೊಸದಾಗಿ ವಿಚಾರಣೆ ನಡೆಸಿ 10 ವಾರಗಳಲ್ಲಿ ತೀರ್ಪು ನೀಡುವಂತೆ ಪ್ರಕರಣವನ್ನು ಮತ್ತೆ ಏಕಸದಸ್ಯ ಪೀಠಕ್ಕೆ ವರ್ಗಾವಣೆ ಮಾಡಿದೆ.

ಕರ್ನಾಟಕ ಎಂಪ್ಲಾಯರ್ಸ್ ಅಸೋಸಿಯೇಷನ್ ಮತ್ತಿತರರು ಏಕಸದಸ್ಯ ಪೀಠದ ತೀರ್ಪು ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ಆಲಿಸಿದ ಸಿಜೆ ಎನ್.ವಿ.ಅಂಜಾರಿಯಾ ಮತ್ತು ನ್ಯಾ. ಕೆ.ವಿ.ಅರವಿಂದ್ ಅವರಿದ್ದ ಪೀಠವು ಈ ಆದೇಶ ನೀಡಿದೆ.

ಮೇಲ್ಮನವಿಯನ್ನು ಭಾಗಶಃ ಮಾನ್ಯ ಮಾಡಿರುವ ನ್ಯಾಯಾಲಯವು ಪ್ರಕರಣವನ್ನು ಮತ್ತೆ ಏಕಸದಸ್ಯ ಪೀಠಕ್ಕೆ ವರ್ಗಾವಣೆ ಮಾಡಿ, ಹೊಸದಾಗಿ ಪ್ರಕರಣದ ವಿಚಾರಣೆ ನಡೆಸಿ ತೀರ್ಪು ನೀಡಬೇಕು. ಇಡೀ ಪ್ರಕ್ರಿಯೆ 10 ವಾರಗಳಲ್ಲಿ ಪೂರ್ಣಗೊಳಿಸಬೇಕು ಎಂದು ನಿರ್ದೇಶನ ನೀಡಿದೆ.



ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ, ''ಉದ್ಯೋಗಿಗಳಿಗೆ ಕನಿಷ್ಠ ವೇತನ ಪಾವತಿ ಅಥವಾ ನಿಗದಿಯಲ್ಲಿ ಉದ್ಯೋಗದಾತರು ಪ್ರಮುಖ ಬಾಧ್ಯಸ್ಥರು. ಏಕೆಂದರೆ ಇಡೀ ಪ್ರಕ್ರಿಯೆಯಿಂದ ಅವರಿಗೆ ಹೊರೆಯಾಗಲಿದೆ. ಹಾಗಾಗಿ, ವೇತನ ನಿಗದಿ ಅಥವಾ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಸರಕಾರ ಯಾವುದೇ ಅಧಿಸೂಚನೆ ಹೊರಡಿಸುವ ಮುನ್ನ ಉದ್ಯೋಗದಾತರ ಅಹವಾಲು ಆಲಿಸಬೇಕು'' ಎಂದು ಆದೇಶಿಸಿದೆ.

ಅಲ್ಲದೆ, ''ಕನಿಷ್ಠ ವೇತನ ನಿಗದಿ ವಿಚಾರ ಬಂದಾಗ ಹಲವು ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ಅಂತಿಮವಾಗಿ ಸರಕಾರ ಎಲ್ಲಾ ಅಂಶಗಳು, ಪರಿಸ್ಥಿತಿಗಳು ಹಾಗೂ ಸ್ಥಿತಿಗತಿಗಳನ್ನು ಅರಿತು ಕನಿಷ್ಠ ವೇತನ ನಿಗದಿ ಮಾಡಬೇಕು. ಹಾಗೆ ಮಾಡುವಾಗ ಸರಕಾರ ಉದ್ಯೋಗದಾತರ ಅಭಿಪ್ರಾಯ, ಅನಿಸಿಕೆಯನ್ನೂ ಆಲಿಸಬೇಕಾಗುತ್ತದೆ,'' ಎಂದು ನ್ಯಾಯಾಲಯ ಹೇಳಿದೆ.

''ಏಕಸದಸ್ಯ ಪೀಠದ ಮೇಲೆ ಮೇಲ್ಮನವಿದಾರರನ್ನು ಪಾರ್ಟಿಗಳನ್ನಾಗಿ ಮಾಡಬೇಕಿತ್ತು. ಆದರೆ ಮಾಡದಿರುವುದು ಸರಿಯಲ್ಲ. ಆಡಳಿತಾತ್ಮಕ, ಅರೆ ನ್ಯಾಯಿಕ, ನ್ಯಾಯಿಕ ಅಥವಾ ಶಾಸನಾತ್ಮಕ ಪ್ರಕ್ರಿಯೆಗಳನ್ನು ಕೈಗೊಂಡರೂ ನಿರ್ಧಾರಗಳಿಂದ ಬಾಧಿತವಾಗುವುದು ಉದ್ಯೋಗದಾತರೇ. ಹಾಗಾಗಿ ಅವರಿಗೆ ತಮ್ಮ ಅನಿಸಿಕೆ ಕೇಳಿಲ್ಲವೆಂದು ಪ್ರಶ್ನಿಸುವ ಹಕ್ಕಿದೆ. ಅದು ಸ್ವಾಭಾವಿಕ ನ್ಯಾಯ ಕೂಡ '' ಎಂದು ನ್ಯಾಯಾಲಯ ಹೇಳಿದೆ.

**ಪ್ರಕರಣದ ಹಿನ್ನೆಲೆ:** ಸರಕಾರ 2022ರ ಜು.28ರಂದು ಕನಿಷ್ಠ ವೇತನ ನಿಗದಿ ಕಾಯಿದೆ 1948, ಸೆಕ್ಷನ್ 3(1)(ಬಿ) ಮತ್ತು ಸೆಕ್ಷನ್ 5(1)(ಬಿ)ಅನ್ವಯ ಯಂತ್ರೋಪಕರಣ ಸಹಿತ ಮತ್ತು ರಹಿತರಾಗಿ ಫೌಂಡ್ರಿಯಲ್ಲಿ ಕೆಲಸ ಮಾಡುವವರಿಗೆ ಕನಿಷ್ಠ ವೇತನ ನಿಗದಿ ಮಾಡಿ ಆದೇಶ ಹೊರಡಿಸಿತ್ತು. ಅದನ್ನು ಪ್ರಶ್ನಿಸಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್, ಕರ್ನಾಟಕ ರಾಜ್ಯ ಸಮಿತಿ ಮತ್ತು ಎಂಜಿನಿಯರಿಂಗ್ ಆ್ಯಂಡ್ ಜನರಲ್ ವರ್ಕರ್ಸ್ ಯೂನಿಯನ್ ಮತ್ತಿತರ ಕಾರ್ಮಿಕ ಸಂಘಟನೆಗಳು ಏಕಸದಸ್ಯ ಪೀಠದ ಮೊರೆ ಹೋಗಿದ್ದವು.

## ...ವಾದದ ಕಲಬುರಗಿ

...ಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ಅಗೌರವದಿಂದ ...ತ್ ಶಾ ಕೂಡಲೇ ಕ್ಷಮೆ ಕೇಳಬೇಕು ಹಾಗೂ

## ಮಹಾ ವೋಟಿಂಗ್ ದೋಷಮುಕ್ತ

**ಹೊಸದಿಲ್ಲಿ:** ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ಮತ ಪ್ರಮಾಣದಲ್ಲಿ